ದಿನಾಂಕಃ07-02-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದಃ-**

ನಾನು ನಿಪಿ-12(ಎಫ್) ಮತ್ತು (ಜಿ) ಪ್ರಕಾರ ನೀಡಿರುವ ನೋಟೀಸುಗಳನ್ನು ಉಮೇಶನಾಯ್ಕ ಮತ್ತು ಭೀಮಾನಾಯ್ಕರವರಿಗೆ ನೀಡಿಲ್ಲ. ಈ ಪ್ರಕರಣದಲ್ಲಿ ಉಮೇಶನಾಯ್ಕ ಮತ್ತು ಭೀಮಾನಾಯ್ಕ ಪಕ್ಷಗಾರರಲ್ಲ ಎಂದರೆ ಸರಿ. ಈ ಪ್ರಕರಣದ 1 ರಿಂದ 4 ನೇ ಪ್ರತಿವಾದಿಯರಿಗೆ ನೋಟೀಸುಗಳನ್ನು ನೀಡಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ. ನಾನು 1 ರಿಂದ 4 ನೇ ಪ್ರತಿವಾದಿಯರಿಗೆ ನೋಟೀಸುಗಳನ್ನು ನೀಡಿರುವ ಕುರಿತು ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ-1 ರ ಛಾಪಾಕಾಗದವನ್ನು ನಾನೇ ತಂದಿದ್ದೇನೆ. ಸದರಿ ಪತ್ರವನ್ನು ಬಾಯಮ್ಮ ಮತ್ತು ಆಕೆಯ ಮಕ್ಕಳ ಹೆಸರಿಗೆ ತಂದಿದ್ದೆನು. ನಿಪಿ-1 ರ ದಾಖಲಾತಿ ಜಾರಿಯಾಗುವ ಪೂರ್ವದಲ್ಲಿ ಸದರಿ ಸ್ವತ್ತು ಕರಿಯಪ್ಪ ಬಿನ್ ರಾಮಣ್ಣನವರ ಹೆಸರಿನಲ್ಲಿ ಇತ್ತು. ದಿಃ04-07-2014 ರಂದು ನಿಪಿ-1 ರ ಛಾಪಾಕಾಗದವನ್ನು ನಾನು ತಂದಿದ್ದೆನು. ಸದರಿ ಪತ್ರವನ್ನು ಅದೇ ದಿನದಂದು ತಂದಿದ್ದೆನು, ಟಿ.ಬಿ. ಕಾವಲಿನ ಸ.ನಂ.155 ಕ್ಕೆ ಸಂಬಂಧಿಸಿದಂತೆ ದಾಖಲಾತಿಯನ್ನು ಮಾಡಿಕೊಳ್ಳಲು ತಂದಿದ್ದೆನು.

ದಿಃ04-07-2014 ರ ಕಾಲಕ್ಕೆ ನಿಪಿ-1 ರ ಸ್ವತ್ತು ಬಾಬಯ್ಯ ಬಿನ್ ಕಾಳಯ್ಯರವರ ಹೆಸರಿನಲ್ಲಿ ಇತ್ತು. ಸದರಿ ಪತ್ರ ಮಾಡಿಕೊಳ್ಳುವ ಕುರಿತು ಬಾಬಯ್ಯ ಬಿನ್ ಕಾಳಯ್ಯರವರಿಗೆ ತಿಳಿಸಿದ್ದೀರಾ ಎಂದರೆ ಸಾಕ್ಷಿ ಸದರಿ ಸ್ವತ್ತು ಕರಿಯಪ್ಪ ಬಿನ್ ರಾಮಯ್ಯನವರಿಗೆ ಸೇರಿದ್ದು, ಬಾಬಯ್ಯ ಬಿನ್ ಕಾಳಯ್ಯರವರಿಗೆ ಸಂಬಂಧಿಸಿದ್ದಲ್ಲ ಎಂದು ಹೇಳುತ್ತಾರೆ. ಬಾಬಯ್ಯ ಬಿನ್ ಕಾಳಯ್ಯ ಕರಿಯಪ್ಪ ಬಿನ್ ರಾಮಯ್ಯನ ಕುಟುಂಬಕ್ಕೆ ಸೇರಿದವರಲ್ಲ, ಹಾಗಾಗಿ ಸದರಿ ಸ್ವತ್ತು ಬಾಬಯ್ಯ ಬಿನ್ ಕಾಳಯ್ಯರವರಿಗೆ ಸೇರಿದ್ದಲ್ಲ. ಸ.ನಂ.155 ರ ಸ್ವತ್ತು ಬಾಬಯ್ಯ ಬಿನ್ ಕಾಳಯ್ಯರವರಿಗೆ ಯಾವ ದಿನಾಂಕದಂದು ಖಾತೆ ಏರ್ಪಟ್ಟಿತ್ತು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಕಾಳಯ್ಯನಿಗೆ ಕರಿಯಪ್ಪ ಎಂಬ ಸಹೋದರ ಇದ್ದಾರೆ ಎಂದರೆ ಸರಿಯಲ್ಲ. ಕಾಳಯ್ಯರವರ ತಂದೆಯ ಹೆಸರು ರಾಮಯ್ಯ ಆಗಿದ್ದು ಕರಿಯಪ್ಪನವರ ತಂದೆಯ ಹೆಸರೂ ಕೂಡ ರಾಮಯ್ಯ ಆಗಿರುತ್ತದೆ, ಆದರೆ ಅವರಿಬ್ಬರೂ ಸಹೋದರರಲ್ಲ. ಕಾಳಯ್ಯ ಮತ್ತು ಕರಿಯಪ್ಪ ಸಹೋದರರು ಎಂಬ ವಿಚಾರ ಗೊತ್ತಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

1986-87 ನೇ ಸಾಲಿನಲ್ಲಿ ಕರಿಯಪ್ಪನವರು ಮೃತಪಟ್ಟ ನಂತರ ಪೌತಿ ಮೇರೆಗೆ ಆತನ ಸಹೋದರನಾದ ಕಾಳಯ್ಯನವರಿಗೆ ಖಾತೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಕಾಳಯ್ಯನವರು ಮೃತಪಟ್ಟ ನಂತರ ಬಾಬಯ್ಯನವರ ಹೆಸರಿಗೆ ಖಾತೆ ಏರ್ಪಟ್ಟಿರುತ್ತದೆ ಎಂದರೆ

ಸಾಕ್ಷಿ ಮೋಸದಿಂದ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಿಪಿ-1 ರ ಕ್ರಯದ ಕರಾರುಪತ್ರ ಮಾಡಿಕೊಳ್ಳುವ ಕಾಲಕ್ಕೆ 5 ನೇ ಪ್ರತಿವಾದಿಗೆ ತಿಳಿಸಲು ತೊಂದರೆ ಇರಲಿಲ್ಲ ಎಂದರೆ ಸರಿ. ಬಾಬಯ್ಯನವರು ಎಷ್ಟು ಮಂದಿ ಸಹೋದರರು ಎಂದು ಗೊತ್ತಿಲ್ಲ. ಸದರಿಬಾಬಯ್ಯನಿಗೆ ವೆಂಕಟಗಿರಿಯಪ್ಪ ಮತ್ತು ಶಾಣಯ್ಯ ಎಂಬ ಸಹೋದರರು ಇರುವ ಕುರಿತು ಗೊತ್ತಿಲ್ಲ. ಸದರಿ ಬಾಬಯ್ಯ ಮತ್ತು ವೆಂಕಟಗಿರಿಯಪ್ಪ ಅಸಲು ದಾವಾ ಸಂಖ್ಯೆಃ245/2014 ರಂತೆ ನನ್ನ ವಿರುದ್ಧ ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ನನ್ನ ವಕೀಲರ ಮೂಲಕ ಹಾಜರಾಗಿದ್ದೆನು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ತಕರಾರು ಸಲ್ಲಿಸಿದ್ದೆನು, ಆ ನಂತರ ವಾದಿಯರು ದಾವೆಯನ್ನು ವಜಾ ಮಾಡಿಸಿಕೊಂಡಿದ್ದರು.

ದಿಃ04-07-2014 ರ ಕ್ರಯದ ಕರಾರು ಪತ್ರ ಮಾಡಿಸಿಕೊಳ್ಳುವ ಪೂರ್ವದಲ್ಲೇ ಬಾಬಯ್ಯ ಮತ್ತು ವೆಂಕಟಗಿರಿಯಪ್ಪ ಅವರು ಸಲ್ಲಿಸಿದ್ದ ದಾವೆಯನ್ನು ವಜಾ ಮಾಡಿಸಿಕೊಂಡಿದ್ದರು. ಸದರಿ ವಿಚಾರವನ್ನು ನಾನು ಈ ದಾವೆಯಲ್ಲಿ ಉಲ್ಲೇಖ ಮಾಡಿಲ್ಲ. ಸ.ನಂ.155 ರ ಸ್ವತ್ತನ್ನು ಬಾಬಯ್ಯ, ವೆಂಕಟಗಿರಿಯಪ್ಪ ಮತ್ತು ಶಾಣಯ್ಯನವರು ದಿಃ15-09-2014 ರಂದು ಪ್ರಕಾಶ್ ಎಂಬುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ಬಾಬಯ್ಯ ಮತ್ತು ಆತನ ಸಹೋದರರಿಗೆ ಹಕ್ಕು ಇದ್ದ ಕಾರಣ ಅವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿಯಲ್ಲ.

1 ರಿಂದ 4 ನೇ ಪ್ರತಿವಾದಿಯರು ನಾನು ನಿಪಿ-1 ಛಾಪಾಕಾಗದವನ್ನು ತಂದ ಕಾಲಕ್ಕೆ ಎನ್.ಆರ್.ಪುರದಿಂದ ಕಡೂರಿಗೆ ಬಂದಿದ್ದರು. ದಿಃ04-07-2014 ರ ಕಾಲಕ್ಕೆ ದಾವಾ ಸರ್ವೆ ನಂಬರಿನ ಖಾತೆಯು 1 ರಿಂದ 4 ನೇ ಪ್ರತಿವಾದಿಯರ ಹೆಸರಿಗೆ ಇರಲಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ನೊಂದಣಿ ಮಾಡಿಕೊಡುತ್ತೇವೆ ಎಂದು ಹೇಳಿದ್ದರು ಎಂದು ಹೇಳುತ್ತಾರೆ. ಸದರಿ ಖಾತೆಯನ್ನು ಸರಿಪಡಿಸಿಕೊಂಡು ಮಾಡಿಕೊಡುತ್ತೇನೆ ಎಂದು ಹೇಳಿರುವ ಬಗ್ಗೆ ನಿಪಿ-1 ರಲ್ಲಿ ಉಲ್ಲೇಖ ಇಲ್ಲ, ಸಾಕ್ಷಿ ನಂತರ ನಿಪಿ-1 ಅನ್ನು ಪರಿಶೀಲಿಸಿ, ಆ ಕುರಿತು ಉಲ್ಲೇಖ ಇದೆ ಎಂದು ಹೇಳುತ್ತಾರೆ. ದಿಃ04-07-2014 ರಂದು 1 ರಿಂದ 4 ನೇ ಪ್ರತಿವಾದಿಯರು ಕಡೂರಿಗೆ ಬಂದಿರಲಿಲ್ಲ ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರು ಸದರಿ ದಿನದಂದು ಮಧ್ಯಾಹ್ನ ಸುಮಾರು 12-30 ಕ್ಕೆ ಬಂದಿದ್ದರು. ಸದರಿ ನಿಪಿ-1 ದಾಖಲಾತಿ ಜಾರಿಯಾಗುವ ಕಾಲಕ್ಕೆ ಸುಮಾರು 6-8 ಜನ ಇದ್ದೆವು.

ನಿಪಿ-1 ರಲ್ಲಿನ ಉಲ್ಲೇಖಗಳನ್ನು ನಾನು ಮತ್ತು 1 ರಿಂದ 4 ನೇ ಪ್ರತಿವಾದಿಯರು ಹೇಳಿ ಬರೆಸಿರುತ್ತೇವೆ. ನಾನು ನಿಪಿ-1 ಛಾಪಾಕಾಗದವನ್ನು ದಿಃ30-06-2014 ರಂದು ಪಡೆದು ಕೊಂಡಿದ್ದೆನು ಎಂದರೆ ಸರಿಯಲ್ಲ. 1 ರಿಂದ 4 ನೇ ಪ್ರತಿವಾದಿಯರಿಗೆ ಮೋಸ ಮಾಡುವ

ಸಲುವಾಗಿ ನಿಪಿ-1 ದಾಖಲಾತಿಯನ್ನು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಪತ್ರದಲ್ಲಿನ ಉಲ್ಲೇಖಗಳ ಕುರಿತು 1 ರಿಂದ 4 ನೇ ಪ್ರತಿವಾದಿಯರಿಗೆ ಮಾಹಿತಿ ಇಲ್ಲ ಹಾಗೂ 1 ರಿಂದ 4 ನೇ ಪ್ರತಿವಾದಿಯರು ನಿಪಿ-1 ರಲ್ಲಿನ ಉಲ್ಲೇಖಗಳ ಕುರಿತು ಮಾಹಿತಿ ನೀಡಿಲ್ಲ ಎಂದರೆ ಸರಿಯಲ್ಲ. ನಿಪಿ-2 ರ ಕಾಲಕ್ಕೆ ನಾನು ಚಿಕ್ಕವಯಸ್ಸಿನವನಾಗಿದ್ದು, ಸದರಿ ದಾಖಲಾತಿಯನ್ನು ನನ್ನ ತಂದೆ ಮಾಡಿಕೊಂಡಿದ್ದರು. ನಿಪಿ-2 ಜಾರಿಯಾದ ಕಾಲಕ್ಕೆ ನಾನು ಹಾಜರಿರಲಿಲ್ಲ. ಬಾಬಯ್ಯ ಮತ್ತು ಆತನ ಸಹೋದರರು 6 ನೇ ಪ್ರತಿವಾದಿಗೆ ದಾವಾಸ್ವತ್ತನ್ನು ಮಾರಾಟ ಮಾಡಿದ ನಂತರ 6 ನೇ ಪ್ರತಿವಾದಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಸ್ವಾಧೀನದಲ್ಲಿ ಇದ್ದೇನೆ ಎಂದು ಹೇಳುತ್ತಾರೆ. ನಾನು ಸ್ವಾಧೀನತೆಯಲ್ಲಿ ಇರುವ ಕುರಿತು ಪಹಣಿಯನ್ನು ಹಾಜರುಪಡಿಸಿಲ್ಲ.

ನಿಪಿ-2 ರ ದಾಖಲಾತಿಯ ಕುರಿತು ನನಗೆ ಬಾಬಯ್ಯ ಮತ್ತು ಇತರರು ಅಸಲು ದಾವಾ ಸಂಖ್ಯೆ:285/2014 ಅನ್ನು ಸಲ್ಲಿಸಿದ ಕಾಲಕ್ಕೆ ತಿಳಿಯಿತು. ಬಾಬಯ್ಯನವರಿಗೆ ನನ್ನ ತಂದೆ ದಾವಾಸ್ವತ್ತನ್ನು ಖರೀದಿಸಿದ ಕುರಿತು ನೋಟೀಸನ್ನು ನೀಡಿದ್ದೆವು. ನಿಪಿ-2 ದಾಖಲಾತಿ ನನ್ನ ತಂದೆಯ ಬಳಿ ಇದ್ದ ಕಾರಣ ದಾವೆ ಸಲ್ಲಿಸುವವರೆಗೂ ನನಗೆ ಗೊತ್ತಿರಲಿಲ್ಲ. ನಿಪಿ-2 ರ ಕುರಿತು ನನ್ನ ತಂದೆ ಕರಿಯಪ್ಪ ಮತ್ತು ಆತನ ವಾರಸುದಾರರು ಲಭ್ಯತೆ ಇಲ್ಲದ ಕಾರಣ ಯಾವುದೇ ನೋಟೀಸನ್ನು ನೀಡಿರಲಿಲ್ಲ. ನನ್ನ ತಂದೆ 5 ವರ್ಷಗಳ ಹಿಂದೆ ಮೃತಪಟ್ಟರುತ್ತಾರೆ. ನಿಪಿ-1 ದಾಖಲಾತಿ ಜಾರಿಯಾಗುವ ಕಾಲಕ್ಕೆ ನನ್ನ ತಂದೆ ಬದುಕಿರಲಿಲ್ಲ, ಸಾಕ್ಷಿ ನಂತರ ಮುಂದುವರೆದು ಬದುಕಿದ್ದರು ಎಂದು ಹೇಳುತ್ತಾರೆ. ನಿಪಿ-1 ದಾಖಲಾತಿ ಜಾರಿಯಾದ ಕಾಲಕ್ಕೆ ನನ್ನ ತಂದೆ ಅಸ್ವಸ್ಥರಾಗಿದ್ದ ಕಾರಣ ಹಾಗೂ ಚಿಕಿತ್ಸೆ ಪಡೆಯುತ್ತಿದ್ದ ಕಾರಣ ಕಡೂರಿಗೆ ಬಂದಿರಲಿಲ್ಲ ಹಾಗೂ ಸದರಿ ದಾಖಲಾತಿ ಜಾರಿಯಾದ ಕಾಲಕ್ಕೆ ಖುದ್ದು ಹಾಜರಿರಲಿಲ್ಲ. ನಿಪಿ-1 ರಲ್ಲಿ ನನ್ನ ಮತ್ತು ನನ್ನ ತಂದೆಯ ಸಹಿ ಇಲ್ಲ ಎಂದರೆ ಸರಿ. ನಿಪಿ-2 ರಲ್ಲೂ ಕೂಡ ನನ್ನ ತಂದೆಯ ಸಹಿ ಇಲ್ಲ ಎಂದರೆ ಸರಿ. ನಿಪಿ-1 ಮತ್ತು 2 ಅನ್ನು ಬಾಬಯ್ಯರವರಿಗೆ ಸೇರಿದ ಸ್ವತ್ತನ್ನು ಕಬಳಿಸಲು ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಪಿ-2 ರಲ್ಲಿ ದಾವಾಸ್ವತ್ತನ್ನು ರೂ.20,000/- ಗಳಿಗೆ ಖರೀದಿ ಮಾಡಿರುವ ಕುರಿತು ನಮೂದು ಇರುವ ಬಗ್ಗೆ ಮಾಹಿತಿ ಇದೆ. ನಿಪಿ-1 ರ ಕುರಿತು 1 ರಿಂದ 4 ನೇ ಪ್ರತಿವಾದಿಯರು ನೋಂದಣಿ ಮಾಡಿಕೊಡುವುದಾಗಿ ಹೇಳಿದ್ದು, ಹಾಗಾಗಿ ಈ ದಾವೆಯನ್ನು ಸಲ್ಲಿಸುವ ಪೂರ್ವದಲ್ಲಿ ಯಾವುದೇ ಲಿಖಿತ ನೋಟೀಸನ್ನು 1 ರಿಂದ 4 ನೇ ಪ್ರತಿವಾದಿಯರಿಗೆ ನೀಡಿಲ್ಲ. ಕರಿಯಪ್ಪನಿಗೆ 1 ನೇ ಪ್ರತಿವಾದಿ ಪತ್ನಿಯಾಗಿದ್ದು, 4 ಮಂದಿ ಮಕ್ಕಳಿದ್ದಾರೆ. 1 ರಿಂದ 3 ನೇ ಪ್ರತಿವಾದಿಯರು

ಮಕ್ಕಳಾಗಿದ್ದು, ಅವರೊಂದಿಗೆ ಮತ್ತೋರ್ವ ಮಗ ಅಥವಾ ಮಗಳು ಇರಬಹುದು ಗೊತ್ತಿಲ್ಲ. ನಿಪಿ-2 ದಾಖಲಾತಿ ಏರ್ಪಟ್ಟ ಒಂದು ವರ್ಷದ ನಂತರದಲ್ಲಿ ಕರಿಯಪ್ಪ ಮತ್ತು ಆತನ ವಾರಸುದಾರರು ಎನ್.ಆರ್.ಪುರಕ್ಕೆ ಹೋಗಿ ನೆಲೆಸಿದ್ದರು. ಕರಿಯಪ್ಪನನ್ನು ನೋಡಿಲ್ಲ, ಆದರೆ ಬಾಯಮ್ಮ, ಅಣ್ಣಪ್ಪರವರನ್ನು ನೋಡಿದ್ದೇನೆ. ನಿಪಿ-2 ಪತ್ರವನ್ನು ಮಾಡಿಸಿಕೊಳ್ಳುವ ಪೂರ್ವದಲ್ಲಿ ಹಾಗೂ ನಿಪಿ-2 ರ ಪತ್ರ ಜಾರಿಯಾಗುವ ಕಾಲಕ್ಕೆ ನೋಡಿದ್ದೆನು. ನಿಪಿ-2 ದಾಖಲಾತಿ ಏರ್ಪಡುವ 2 ತಿಂಗಳ ಪೂರ್ವದಲ್ಲಿ ನೋಡಿದ್ದೆನು. 1985 ರಿಂದ 2014 ರ ಅವಧಿಯ ನಡುವೆ ನಾನು ಕರಿಯಪ್ಪ ಮತ್ತು ಆತನ ವಾರಸುದಾರರನ್ನು ನೋಡಿಲ್ಲ. ಅಂತೆಯೇ ನನ್ನ ತಂದೆ ಕೂಡ ಅವರನ್ನು ನೋಡಿರಲಿಲ್ಲ.

ನಿಪಿ-2 ರ ಕುರಿತು ನೊಂದಣಿ ಮಾಡಿಸಿಕೊಡುವ ಬಗ್ಗೆ ಕರಿಯಪ್ಪ ಮತ್ತು ಆತನ ವಾರಸುದಾರರು ಎಲ್ಲಿ ಇದ್ದಾರೆ ಎಂದು ಗೊತ್ತಿರದ ಕಾರಣ ನೋಟೀಸನ್ನು ನೀಡಿಲ್ಲ. ದಾವಾ ಸರ್ವೆ ನಂಬರಿನ ಕುರಿತು 1 ರಿಂದ 4 ನೇ ಪ್ರತಿವಾದಿಯರಿಗೆ ಹಕ್ಕು ಇಲ್ಲದಿದ್ದಾಗ್ಯೂ ಕೂಡ ನಿಪಿ-1 ಅನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ದಾವಾ ಸರ್ವೆ ನಂಬರಿನ ಕುರಿತು ಕರಿಯಪ್ಪ ಹಾಗೂ ಆತನ ವಾರಸುದಾರರಿಗಾಗಲೀ ಅಥವಾ ನನಗಾಗಲೀ ಯಾವುದೇ ಹಕ್ಕು, ಅಧಿಕಾರ ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ಕ್ಕೆ ನಾನು ಮತ್ತು ನನ್ನ ತಂದೆ ಸಹಿ ಮಾಡಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಾವೆಯಲ್ಲಿ ಕೋರಿರುವ ಕುರಿತು ಪರಿಹಾರ ಪಡೆಯಲು ಅರ್ಹರಲ್ಲ ಎಂದರೆ ಸರಿ.

**6 ನೇ ಪ್ರತಿವಾದಿ ಪರ ವಕೀಲರು ಗೈರು ಹಾಜರಿದ್ದು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ : ಇಲ್ಲ**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ.

(ರಘುರಾಮ. ಎನ್.ಎಸ್.)
ಪ್ರ:1 ನೇ:ಹೆ: ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.